ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಇವತ್ತಿನ ದಿವಸ ನನ್ನ ಸಲಹೆಗೆ ಕಾಯಬೇಕಾಗಿಲ್ಲ. ಇವತ್ತಿನ ದಿವಸ ಬೆಲೆಗಳ ವಿಚಾರವಾಗಿ ಇವರು ಶ್ವೇತಪತ್ರವನ್ನೇ ಹೊರಡಿಸಿರುವಾಗ ಅದನ್ನೇ ಆಧಾರವಾಗಿ ಇಟ್ಟುಕೊಂಡು ಇವರ ಮಜೂರಿಯನ್ನು ಹೆಚ್ಚು ಮಾಡಬಹುದಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಅವರಿಗೆ ಹೆಚ್ಚು ಮಜೂರಿ ಕೊಡುವುದು ಒಂದೇ ಪ್ರಶ್ನೆ ಅಲ್ಲ ಇವತ್ತು ಅವರು ಉತ್ಪಾದನೆ ಮಾಡಿದ್ದು ಮಾರಾಟವಾಗಬೇಕಾಗುತ್ತದೆ. ನಾವು ಈ ಮಾಲಿನ ಮಾರ್ಕೆಟ್ಟಿಂಗ್‌ನ್ನೂ ನೋಡಬೇಕಾಗುತ್ತದೆ. ಇದರ ಬೆಲೆ ಹೆಚ್ಚು ಆದರೆ ಅವು ಮಾರಾಟವಾಗುವುದಿಲ್ಲ, ಇದರಿಂದ ಮತ್ತೆ ಅವರು ತೊಂದರೆಗೆ ಈಡಾಗಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ತಾವು ಏನು 10 ರಿಂದ 25 ರೂಪಾಯಿ ವರೆಗೆ ಕೂಲಿ ಸಿಗುತ್ತಿದೆ ಎಂದು ಹೇಳುತ್ತಿದ್ದೀರಿ ಇದನ್ನು ಮೊಟರ್ ಲೆಕ್ಕದಲ್ಲಿ ಕೊಡಲಾಗುತ್ತಿದೆಯೋ ಅಥವಾ ದಿನಕೂಲಿ ಪ್ರಕಾರ ಕೊಡಲಾಗುತ್ತಿದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊಟರ್ ಲೆಕ್ಕದಮೇಲೆ ಕೊಟ್ಟರೂ ಅವರಿಗೆ ಅವರೇಜ್ ಆಷ್ಟೇ ಸಂಬಳ ಸಿಗುತ್ತದೆ.

ಬೆಳಗಾಂ ಜಿಲ್ಲೆಯಲ್ಲಿ ಇದ್ದ ಎಂ. ಜಿ. ಫರ್ಟಿಲೈಸರ್ಸ್ ಉದ್ಯೋಗ ಸಮೂಹದ ಮಾಹಿತಿ ಬಗ್ಗೆ

ಪ್ರಸಂಖ್ಯೆ, 300 (III) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಂ. ಜಿ. ಫರ್ಟಿಲೈಸರ್ಸ್ ಸಂಸ್ಥೆಗೆ ಸರ್ಕಾರದವರಿಂದ ಬುತಾರಾಮಹಟ್ಟಿಯ ಹತ್ತಿರ ಎಷ್ಟು ಎಕರೆ ಜಮೀನು ಕೊಡಲಾಗಿದೆ.

ಆ) ಆದಾಗಿದ್ದಲ್ಲಿ ಸದರಿ ಸಂಸ್ಥೆಯನ್ನು ಪ್ರಾರಂಭಿಸಲು ಬ್ಯಾಂಕಿನಿಂದ ಎಷ್ಟು ಹಣ ಕೊಡಲಾಗಿದೆ ಹಾಗೂ ಆ ಸಂಸ್ಥೆಯಲ್ಲಿ ಎಷ್ಟು ಟನ್ ಗೊಬ್ಬರವನ್ನು ತಯಾರು ಮಾಡಲಾಗುತ್ತಿದೆ ?

ಇ) ಈ ಸಂಸ್ಥೆಗೆ ಪ್ರತಿ ವರ್ಷ ಕೊಡುತ್ತಿರುವ ಯೂರಿಯಾ ಸುಪರ್ ಫಾಸ್‌ಫೇಟ್ ಹೂಗೂ ಇನ್ನಿತರ ಗೊಬ್ಬರದ ಪ್ರಮಾಣ ಎಷ್ಟು ;

ಈ) ಈ ಸಂಸ್ಥೆಯ ವ್ಯವಹಾರದಲ್ಲಿ ಸರ್ಕಾರದಿಂದ ತೊಡಗಿಸಿದ ಹಣದ ಮೊತ್ತವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು.— ಅ) ಇಲ್ಲ

ಆ) ಸದರಿ ಸಂಸ್ಥೆಗೆ ಸ್ಥಳೀಯ ಬ್ಯಾಂಕಿನಿಂದ ಹಣ ಕೊಟ್ಟಿಲ್ಲ. ಆದರೆ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಈ ಸಂಸ್ಥೆಗೆ ಆರ್ಥಿಕ ಸಾಲವನ್ನು ಕೊಟ್ಟಿರುತ್ತಾರೆ. 1973-74ರ ಲಾಗಾಯ್ತು ಈ ಸಂಸ್ಥೆ ಗೊಬ್ಬರವನ್ನು ತಯಾರು ಮಾಡಿಲ್ಲ.

ಇ) ಈ ಸಂಸ್ಥೆಯನ್ನು 1973-74ನೇ ಸಾಲಿನಿಂದ ಮುಚ್ಚಲ್ಪಟ್ಟಿರುತ್ತೆ. ಆದುದರಿಂದ ಸರ್ಕಾರದಿಂದ ಯಾವ ರೀತಿಯ ಕಚ್ಚಾ ಸಾಮಾಗ್ರಿಗಳನ್ನು ಒದಗಿಸಿರುವುದಿಲ್ಲ.

ಈ) ರಾಜ್ಯ ಸರ್ಕಾರದಿಂದ ಈ ಸಂಸ್ಥೆಗೆ ಹಣ ಒದಗಿಸಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, 'ಆ' ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ ಅದು ಸತ್ಯಕ್ಕೆ ದೂರವಾಗಿದೆ; ಆ ಒಂದು ಸಂಸ್ಥೆ ಇರತಕ್ಕಂತಹ ಜಾಗ ಸರ್ಕಾರದ ಜಮೀನು ಆಗಿರಬಹುದು ಆ ಬಗ್ಗೆ ತನಿಖೆ ಮಾಡಿ ನೋಡಬೇಕಾಗುತ್ತದೆ ಇವತ್ತಿನ ದಿವಸ ಜನಸಾಮಾನ್ಯರು ಜಮೀನನ್ನು ಕೇಳಿದರೆ ಕೊಡಲು ಹಿಂದೆ ಮುಂದೆ ನೋಡುತ್ತೀರಿ ಆದರೆ ಇಂತಹ ಜನ ಈ ರೀತಿ ಸಂಸ್ಥೆಗಳ ಮೂಲಕ ಇಷ್ಟು ಆಸ್ತಿ ಹೊಡೆದರೆ ಯಾರೂ ಸಹಿಸುವುದಕ್ಕೆ ಆಗುವುದಿಲ್ಲ ಮತ್ತು ಆ ಸಂಸ್ಥೆ ಮೇಲೆ ಅವರು ತೊಡಗಿಸಿರುವ ಹಣ ಎಷ್ಟು ? ಆ ಸಂಸ್ಥೆ ಮುಚ್ಚುವುದಕ್ಕಿಂತ ಮುಂಚೆ ಆ ಸಂಸ್ಥೆಗೆ ಕೊಟ್ಟ ಕಚ್ಚಾ ಸಾಮಗ್ರಿಗನ್ನೆಲ್ಲಾ ಅವರು ಕಾಳಸಂತೆಯಲ್ಲಿ ಮಾರಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಈ ಸಂಸ್ಥೆ ಈ ರೀತಿ ಮಾಡಿ ರೈತರಿಗೆ ಅನ್ಯಾಯ ಮಾಡಿರುವ ವಿಷಯ ಸರ್ಕಾರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಲ್ಲಿ ಅದರ ಅವ್ಯವಹಾರದ ಬಗ್ಗೆ ವಿವರ ಇದ್ದರೆ ಕೊಡಲಿ, ಆ ಬಗ್ಗೆ ನಾನು ವಿಚಾರ ಮಾಡಿಸುತ್ತೇನೆ. ಮಾನ್ಯ ಸದಸ್ಯರು 1973-74ನೇ ಸಾಲಿನಲ್ಲಿ ಅಲ್ಲಿ ಅವ್ಯವಹಾರ ಆಗಿದೆ ಎಂದು ಹೇಳುತ್ತಿದ್ದಾರೆ. ಅವರು ವಿವರ ಕೊಡಲಿ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಶಾಸಕರಿಗೇ ವಿವರ ಕೇಳುವುದಾದರೆ

ಇದೇನು ಸರ್ಕಾರ ಮುಲಗಿದೆಯೇ ಎಂದು ನಾನು ಕೇಳಬೇಕಾಗುತ್ತದೆ ಎಲ್ಲಾ ವಿವರಗಳನ್ನು ನಾವು ಕೊಟ್ಟು ಆವರಲ್ಲಿ ನಿಷ್ಠೂರ ಹೊಂದಿ ಮೊನ್ನೆ ಪತ್ರಿಕಾ ಸಂಪಾದಕರ ಕೊಲೆ ಆಯಿತಲ್ಲಾ ಆ ರೀತಿ ಸ್ಥಿತಿ ನಮ್ಮಲ್ಲೂ ಉದ್ಭವನಾಗಬೇಕೇ ? ತಮ್ಮ ಇಲಾಖೆ ಏನು ಮಾಡುತ್ತಿದೆ ? ಅಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಲೂಟಿಯಾಗಿರುವಾಗ ತಾವು ಏಕೆ ಸುಮ್ಮನೆ ಕುಳಿತ್ತಿದ್ದೀರಿ ಬೇರೆ ರಾಜ್ಯದಿಂದ ಬಂದ ಜನ ಈ ರೀತಿ ಆಸ್ತಿ ಲೂಟಿ ಮಾಡುತ್ತಿರುವಾಗ ನಮ್ಮ ರಾಜ್ಯದ ಜನ ಎಲ್ಲಿಗೆ ಹೋಗಬೇಕು? ಅವರಿಗೆ ಸಾಮಾಗ್ರಿ ಒದಗಿಸಿದ ಮೇಲೆ ಸರ್ಕಾರ ಆ ಬಗ್ಗೆ ತನಿಖೆ ಮಾಡುವುದು ಬೇಡವೇ ?

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಸದಸ್ಯರು 10 ವರ್ಷಗಳ ಹಿಂದಿನ ವಿಷಯವನ್ನು ಹೇಳುತ್ತಿದ್ದಾರೆ. ಆ ಬಗ್ಗೆ ಈಗ ಸರ್ಕಾರದಲ್ಲಿ ರೆಕಾರ್ಡ್ ಇಲ್ಲ. ಆದು ಇದ್ದಿದರೆ ನಾನೇ ಆ ಬಗ್ಗೆ ತನಿಖೆ ಮಾಡಿಸುತ್ತಿದ್ದೆ. ಈ ಸಂಸ್ಥೆ ಸರ್ಕಾರದಿಂದ ಏನೂ ಹಣವನ್ನು ಪಡೆದಿರುವ್ದಿಲ್ಲ ಹಾಗೂ ಸರ್ಕಾರ ಈ ಸೆಂಸ್ಥೆಯಲ್ಲಿ ತನ್ನ ಹಣವನ್ನು ತೊಡಗಿಸಿಲ್ಲ ಆದ್ದರಿಂದ ತನಿಖೆ ಮಾಡಲು ಒರುವ್ದಿಲ್ಲ ಆದರೂ ತಾವು ಏನು ಹೇಳುತ್ತಿದ್ದೀರಿ ಆ ಬಗ್ಗೆ ತನಿಖೆ ಮಾಡಿಸುತ್ತೇನೆ

ಶ್ರೀ ಎಂ ಎಸ್ ಕೃಷ್ಣನ್ —ಇದು ರೈತರಿಗೆ ಬೇಕಾಗತಕ್ಕ ಸೀನೆಗೊಬ್ಬರವನ್ನು ತಯಾರು ಮಾಡ ತಕ್ಕ ಕೈಗಾರಿಕೆಯಾಗಿದ್ದು 1973ರಲ್ಲಿ ಇದು ಸ್ಥಗಿತಗೊಂಡಿದ್ದು, ಅಲ್ಲಿಂದ ಈಚೆಗೆ ಅಲ್ಲಿ ಉತ್ಪಾದನೆಯಾಗು ತ್ತಿಲ್ಲ. ಆದ್ದರಿಂದ ಈ ಸಂಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಆದರ ಉತ್ಪಾದನೆ ಪ್ರಾರಂಭ ಮಾಡಲು ಸಾಧ್ಯವಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಇದನ್ನು ನಡೆಸುವ್ದಕ್ಕೆ ಆಗುವ್ದಿಲ್ಲ ಆಗಲೇ ಇದರಲ್ಲಿ ದುಡ್ಡು ನಷ್ಟವಾಗಿದೆ. ರಾಜ್ಯ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆ ಯಾಗಲೀ ಇದರಲ್ಲಿ ಹಣವನ್ನು ತೊಡಗಿಸಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ ಇದರಲ್ಲಿ ರಾಜ್ಯ ಸರ್ಕಾರದ ಹಣ ಹೂಡಿಕೆ ಆಗದೇ ಇರ ಬಹುದು ಆದರೆ ಹೊರಗಿನ ಜನ ಇಲ್ಲಿ ಬಂದು ಲೈಸೆನ್ಸ್ ಪಡೆದು ಇಂತಹ ದುರ್ವ್ಯವಹಾರ ಮಾಡಿದರೆ ಅವರಿಗೆ ಮುಟ್ಟುಗೋಲು ಹಾಕುವ್ದಕ್ಕೆ ಆಗುವ್ದಿಲ್ಲವೇ ? ಇನ್ನತ್ತ ಸರ್ಕಾರ ಅಲ್ಲಿ ಹಣ ಹೂಡಿಕೆ ಮಾಡದಿದ್ದರೆ ಏನೆಂದರೆ ಸರ್ಕಾರಿ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಈ ಸಂಸ್ಥೆಗೆ ಸಾಲವನ್ನು ಕೊಟ್ಟಿಲ್ಲವೇ ? ರಾಜ್ಯವಷ್ಟೆ ಇರಬಹುದು ಅಥವಾ ದೇಶ ವಷ್ಟೆ ಇರಬಹುದು ಒಟ್ಟಿನಲ್ಲಿ ಸರ್ಕಾರಿ ಬ್ಯಾಂಕಿನ ಹಣ ಇಲ್ಲಿ ಹೂಡಿಕೆಯಾಗಿಲ್ಲವೇ ?

ಶ್ರೀ ಎಸ್. ಆರ್ ಬೊಮ್ಮಾಯಿ — ಆ ಸಂಸ್ಥೆಗೆ ಮುಟ್ಟುಗೋಲು ಹಾಕಬೇಕಾದರೆ ಅದರಲ್ಲಿ ಸರ್ಕಾರದ ಹಣ ಹೂಡಿಕೆಯಾಗಿರಬೇಕು. ಕೇಂದ್ರ ಸರ್ಕಾರದ ಅಡಳಿತದಲ್ಲಿ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹಣ ಅಲ್ಲಿಗೆ ಸಾಲರೂಪವಾಗಿ ಹೋಗಿದೆ ಆ ಬಗ್ಗೆ ಕಾರ್ಯಕ್ರಮ ಅವರ ಮೇಲೆ ಗೆಡುಕೊಳ್ಳಬಹುದು. ಕಾನೂನು ಪ್ರಕಾರ ರಾಜ್ಯ ಸರ್ಕಾರ ಈ ಸಂಸ್ಥೆ ಬಗ್ಗೆ ಏನೂ ಮಾಡುವುದೇ ಕ್ಕಾಗುವುದಿಲ್ಲ. ಆದರೂ ತಾವು ಏನು ಹೇಳಿದ್ದೀರಿ ಆ ಬಗ್ಗೆ ಏನಾದರೂ ದುರ್ವ್ಯವಹಾರ ಇದ್ದರೆ ನಾನು ವಿಚಾರ ಮಾಡಿಸುತ್ತೇನೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು (ಸಂಡೂರು ಮ್ಯಾಂಗನೀಸ್ ಐರನ್ ಓರ್) ಕಾರ್ಖಾನೆಯ ಕೂಲಿಗಾರರು ಮುಷ್ಕರ ಹೂಡಿರುವುದರ ಬಗ್ಗೆ.

ಪ್ರಶ್ನೆಸಂಖ್ಯೆ 301 (332) ಶ್ರೀ ಜನ್ನಬಸವನ ಗೌಡ ಕೆ. (ಕೊಡ್ಲಿಗಿ) -- ಮಾನ್ಯ ಕಾರ್ಮಿಕ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು (ಸೊಂಡೂರು ಮ್ಯಾಂಗನೀಸ್ ಓರ್) ಕಾರ್ಖಾನೆ ಕೂಲಿ ಗಾರರು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಕೂಲಿಗಾರರ ಬೇಡಿಕೆಗಳನ್ನು ಈಡೇರಿಸಲು ವಿಫಲವಾಗಿರುವುದಕ್ಕೆ ಕಾರಣಗಳೇನು ;

ಇ) ಇಸದರಿ ಕಂಪನಿಯವರು ವಿದ್ಯುಚ್ಛಕ್ತಿ ಇಲಾಖೆಗೆ ನೀಡಬೇಕಾದ ಬಾಕಿ ಏನಾದರೂ ಇದೆಯೇ ?

ಶ್ರೀ ಆಜೀಜ್‌ಸೇಠ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು).--

ಈ) ಈಗ ಮುಷ್ಕರ ಇಲ್ಲ ಕೆಲಸಗಾರರು ಕೆಲಸಕ್ಕೆ ವಾಪಸ್ ಆಗಿದ್ದಾರೆ ಮತ್ತು ವಿವಾದ ವಿಷಯಗಳನ್ನು ಹುಬ್ಬಳ್ಳಿಯ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

ಉ) ವಿಷಯ ಪರಿಶೀಲನೆಯಲ್ಲಿದೆ. ಬೇಡಿಕೆಗಳನ್ನು ಈಡೇರಿಸಲು ವಿಫಲವಾಗಿರುವ ಪ್ರಶ್ನೆಯು ಉದ್ಭವಿಸುವುದಿಲ್ಲ.